# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 233 |
| 2 | ಸದಸ್ಯರ ಹೆಸರು | : | ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 17.02.2022 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಪ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಪೊಲೀಸ್ ಇಲಾಖೆಯಲ್ಲಿ ಅಡಿಷನಲ್ ಎಸ್.ಪಿ. ಹುದ್ದೆಗಳ ಸಂಖ್ಯೆ: ಎಷ್ಟು; ಸದರಿ ಹುದ್ದೆಗಳಲ್ಲಿ ಸಬ್ ಇನ್ಸ್‌ಪೆಕ್ಟರ್ ಹುದ್ದೆಯಿಂದ ಮುಂಬಡ್ತಿ ಹೊಂದಿದವರ ಸಂಖ್ಯೆ ಎಷ್ಟು; | ಎಸ್.ಪಿ. (ಸಿವಿಲ್) (ನಾನ್ ಐಪಿಎಸ್) ಹುದ್ದೆಗಳ ಸಂಖ್ಯೆ: 109, ಸದರಿ ಹುದ್ದೆಗಳಲ್ಲಿ ಸಬ್‌ಇನ್ಸ್‌ಪೆಕ್ಟರ್ ಹುದ್ದೆಯಿಂದ ಮುಂಬಡ್ತಿ ಹೊಂದಿರುವವರ ಸಂಖ್ಯೆ: 34 |
| ಆ) | ಇನ್ಸ್‌ಪೆಕ್ಟರ್ ಹುದ್ದೆಯಿಂದ ಡಿ.ಎಸ್.ಪಿ. ಹುದ್ದೆಗೆ ಕ.ಸ.ಸೇ. ನಿಯಮ 32ರಡಿ ಸ್ವತಂತ್ರ ಪ್ರಭಾರದಲ್ಲಿರಿಸುವ ಸಂದರ್ಭದಲ್ಲಿ ಮೀಸಲಾತಿ (ರೋಷ್ಟರ್) ನಿಯಮಗಳನ್ನು ಪಾಲಿಸಲಾಗುತ್ತಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು; | ಕ.ನಾ.ಸೇ. ನಿಯಮ 32 ರಡಿ ಮಾಡಲಾಗುವ ಸ್ವತಂತ್ರ ಪ್ರಭಾರ ವ್ಯವಸ್ಥೆಯು ತಾತ್ಕಾಲಿಕ ವ್ಯವಸ್ಥೆಯಾಗಿದ್ದು ಹಾಗೂ ಸ್ವತಂತ್ರ ಪ್ರಭಾರದಲ್ಲಿರಿಸಿರುವ ಆದೇಶವನ್ನು ಯಾವುದೇ ಸಂದರ್ಭದಲ್ಲಾದರೂ ಹಿಂದಕ್ಕೆ ಪಡೆಯಲು ಆಸ್ಪದವಿರುವುದರಿಂದ ಮೀಸಲಾತಿ ನಿಯಮಗಳನ್ನು ನಿಯಮಾನುಸಾರ ಪಾಲಿಸಲಾಗುತ್ತಿದೆ. |
| ಇ) | ಪ್ರಸ್ತುತ ಡಿ.ಎಸ್.ಪಿ. ಹುದ್ದೆಯ ವೃಂದ ಬಲ ಎಷ್ಟು; ಇವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಹುದ್ದೆಗಳ ಸಂಖ್ಯೆ ಎಷ್ಟು; ನಿಯಮಾನುಸಾರ ಡಿ.ಎಸ್.ಪಿ. ಹುದ್ದೆಯ ಒಟ್ಟು ವೃಂದ ಬಲದ ಶೇ. 15ರಷ್ಟು ಪರಿಶಿಷ್ಟ ಜಾತಿಯವರಿಗೆ ಹಾಗೂ ಶೇ. 3ರಷ್ಟು ಪರಿಶಿಷ್ಟ ಪಂಗಡದವರಿಗೆ ಪ್ರಾತಿನಿಧ್ಯ ನೀಡಲಾಗಿದೆಯೇ; | ಪ್ರಸ್ತುತ ಡಿವೈಎಸ್‌ಪಿ (ಸಿವಿಲ್) ವೃಂದ ಬಲ 419 ಇರುತ್ತದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಹುದ್ದೆಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 21 ಎಸ್‌ಬಿಸಿ 1997, ದಿನಾಂಕ: 03-02-1999 ಮತ್ತು ದಿನಾಂಕ: 13-04-1999 ರಲ್ಲಿನ ನಿರ್ದೇಶನದನ್ವಯ ಪರಿಶಿಷ್ಟ ಜಾತಿ ಶೇ. 15 ರಷ್ಟು ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ. 3 ರಷ್ಟು ಪ್ರಾತಿನಿಧ್ಯವನ್ನು ನೀಡಲಾಗಿರುತ್ತದೆ. |
| ಈ) | ಒಂದು ಹುದ್ದೆಯಿಂದ ಇನ್ನೊಂದು ಹುದ್ದೆಗೆ ಕ.ಸ.ಸೇ. ನಿಯಮ 32ರಡಿ ಪ್ರಭಾರದಲ್ಲಿರಿಸುವ ಸಂದರ್ಭದಲ್ಲಿ ವಿವಿಧ ಇಲಾಖೆಯಲ್ಲಿ ಮೀಸಲಾತಿ (ರೋಷ್ಟರ್) ನಿಯಮಗಳನ್ನು ಪಾಲಿಸಿರುವಂತೆ, ಪೊಲೀಸ್ ಇಲಾಖೆಯಲ್ಲಿ ಪಾಲಿಸದಿರಲು ಕಾರಣವೇನು? | ಪೊಲೀಸ್ ಇಲಾಖೆಯಲ್ಲಿ ಒಂದು ಹುದ್ದೆಯಿಂದ ಇನ್ನೊಂದು ಹುದ್ದೆಗೆ ಕ.ನಾ.ಸೇ. ನಿಯಮ 32 ರಡಿ ಪ್ರಭಾರದಲ್ಲಿರಿಸುವ ಸಂದರ್ಭದಲ್ಲಿ ರೋಸ್ಟರ್ ನಿಯಮಗಳನ್ನು ಪಾಲಿಸದಿರುವ ಬಗ್ಗೆ ತಕ್ಷಣವೇ ಪರಿಶೀಲಿಸಲಾಗುವುದು. |

ಸಂಖ್ಯೆ: ಒಇ 46 ಪಿಇಜಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

# ಅನುಬಂಧ

| ಕ್ರ ಸಂ | ವಿವರಗಳು | ಕಾರ್ಯನಿರತ ಬಲ (ಹೈ–ಕಯೇತರ) | | | | ಕಾರ್ಯನಿರತ ಬಲ (ಹೈ–ಕ) | | | |
|---|---|---|---|---|---|---|---|---|---|
| | | ಎಸ್‌ಸಿ | ಎಸ್‌ಟಿ | ಇತರ | ಒಟ್ಟು | ಎಸ್‌ಸಿ | ಎಸ್‌ಟಿ | ಇತರೆ | ಒಟ್ಟು |
| 1. | ಮಂಜೂರಾತಿ ಬಲ | | | | 359 | | | | 60 |
| 2. | ನೇರ ನೇಮಕಾತಿ (ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ತರಬೇತಿಯಲ್ಲಿರುವ ) | 07 | 01 | 39 | 47 | 02 | 01 | 04 | 07 |
| 3. | ಕರ್ತವ್ಯ ನಿರ್ವಹಿಸುತ್ತಿರುವ ಕ್ರಮಬದ್ಧ ಹೊಂದಿದ ಡಿವೈಎಸ್‌ಪಿ | 41 | 08 | 210 | 259 | 09 | 06 | 32 | 47 |
| 4. | ಒಟ್ಟು | 48 | 09 | 249 | 306 | 11 | 07 | 36 | 54 |
| 5. | ಶೇಕಡವಾರು | 15.68% | 2.94% | | | 20.37% | 12.96% | | |